





# ಜುನೊ ಬೆಕ್ಕಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು!

ಈ ಬೆಕ್ಕಿನ ಹೆಸರು ಜುನೊ. ಇದರ ಭಾವಭಂಗಿಗಳು ವೈವಿಧ್ಯಮಯ. ಇದಕ್ಕಾಗಿಯೇ ಜುನೊ ಬೆಕ್ಕಿಗೆ ವಿಶ್ವದಾದ್ಯಂತ ಡಿಮ್ಯಾಂಡಪ್ಪೋ ಡಿಮ್ಯಾಂಡ್.

ಜುನೊ ಬೆಕ್ಕಿನ ಜನಪ್ರಿಯತೆ ಇಂದು ನಿನ್ನೆಯದಲ್ಲ. ಸರಿಸುಮಾರು 2012ರಿಂದಲೂ ಸಾಮಾಜಿಕ ಜಾಲತಾಣದಲ್ಲಿ ಇದರ ನೂರಾರು ಭಾವಭಂಗಿಯ ಚಿತ್ರಗಳು ರಾರಾಜಿಸುತ್ತಿವೆ. ಶೇ. 25ರಷ್ಟು ಬರ್ಮೀಸ್, ಶೇ. 75ರಷ್ಟು ಹಿಮಾಲಯನ್ ತಳಿಯ ಸಮ್ಮಿಶ್ರ ರೂಪದ ಬೆಕ್ಕಿನ ನೀಲಿ ಕಣ್ಣು, ಮೈಯ ತುಪ್ಪಳ, ಕೋಪಗೊಂಡಂತೆ ಕಾಣುವ ಭಾವಭಂಗಿಗಳ ಆಕರ್ಷಕ ವ್ಯಕ್ತಿತ್ವಕ್ಕೆ ಮಾರು ಹೋಗದವರಿಲ್ಲ.

ದರ ತೂಕ ಮೂವತ್ತಮೂರು ಪೌಂಡ್‌ಗಳಷ್ಟಿದೆ. ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಜುನೋಗೆ 1. 85 ಲಕ್ಷ ಅಭಿಮಾನಿಗಳಿದ್ದಾರೆ. 70 ಲಕ್ಷ ಮಂದಿ ಇದರ ಭಾವಚಿತ್ರಗಳನ್ನು ನೋಡಿ ಲೈಕ್ ಮಾಡಿದ್ದಾರೆ. ಲಾರ್ಡ್ ಲಿಯೋ ಎಂಬ ಸಹೋದರ, ಹವಾನಾ ಎಂಬ ಸಹೋದರಿಯೂ ಇದರಂತೆಯೇ ರೂಪ ಹೊಂದಿದ್ದಾರೆ.

■ ಪ. ರಾಮಕೃಷ್ಣ ಶಾಸ್ತ್ರಿ